SA – 415

33

B.com

IV ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಎಪ್ರಿಲ್/ಮೇ 2015
(2012-13 and Onwards) (Fresh + Repeaters)
ಕನ್ನಡ ಭಾಷಾ ಪತ್ರಿಕೆ – IV
ಸಾಹಿತ್ಯ ಸಲ್ಲಾಪ – 2 ಮತ್ತು ವ್ಯಾವಹಾರಿಕ ಕನ್ನಡ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

ಭಾಗ – 1

(ಸಾಹಿತ್ಯ ಸಲ್ಲಾಪ – 2)

I. ಈ ಪದ್ಯದ ಭಾವಾರ್ಥ ಬರೆಯಿರಿ : (1×5=5)

ಏನು ಬಂದಿರಿ ಹದುಳವಿದ್ದಿರೆ ? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಸಿರ ಹೊಟ್ಟೆ ಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮ ದೇವನು ?

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (3×5=15)

1) ಬುದ್ಧನ ಬಗ್ಗೆ ನದಿಯು ಹೇಳಿದ ಮಾತುಗಳೇನು ?

2) ಸರೋಜಾಳ ಗಂಡನ ನಿಜವಾದ ವ್ಯಕ್ತಿತ್ವ.

3) ಗ್ರಹಣದ ಬಗ್ಗೆ ಇರುವ ವೈಜ್ಞಾನಿಕ ಚಿಂತನೆಗಳೇನು ?

4) ಇಪ್ಪತ್ತನೆಯ ಶತಮಾನದ ಕೊನೆಯ ದಶಕ, 'ಭಯೋತ್ಪಾದಕ ಬಾಯಿ' ಮತ್ತು 'ಭಯೋತ್ಪಾದಕ ಬಂದೂಕ' ಎಂದು ಲೇಖಕರು ಹೇಳಲು ಕಾರಣವೇನು ?

5) ಕೃಷ್ಣನ ವ್ಯಾಧಿ ಹೇಗೆ ವಾಸಿಯಾಯಿತು ?

ಪು.ತಿ.ನೋ.

III. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×12=36)**

1) ಅಲ್ಲಮ ಪ್ರಭುವಿನ ವಚನಗಳಲ್ಲಿನ ವೈಚಾರಿಕತೆಯನ್ನು ಕುರಿತು ಬರೆಯಿರಿ.

2) ಬುದ್ಧನನ್ನು ಕುರಿತು ಪುಸ್ತಕ, ವೃಕ್ಷ ಹಾಗೂ ನದಿ ಏನನ್ನು ಹೇಳಿದವು ? ವಿವರಿಸಿ.

3) 'ಬಿಡುಗಡೆ' ಕಥೆಯ ಆಶಯವನ್ನು ಕುರಿತು ಬರೆಯಿರಿ.

4) ಮೂಲಿಕೆ ಬಳ್ಳಿಯ ಬಗ್ಗೆ ಮಾರ ಹೇಳುವ ಪ್ರಸಂಗಗಳ ಸ್ವಾರಸ್ಯವನ್ನು ಕುರಿತು ಬರೆಯಿರಿ.

5) ಕೈಗಾರಿಕೀಕರಣ ಮತ್ತು ಜಾಗತೀಕರಣಗಳ ಸಾಧಕ – ಬಾಧಕಗಳ ಬಗ್ಗೆ ಲೇಖಕರ ನಿಲುವೇನು ? ಪರಿಶೀಲಿಸಿ.

## ಭಾಗ – 2

## (ವ್ಯಾವಹಾರಿಕ ಕನ್ನಡ)

IV. ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : **(4×5=20)**

1) ಸಭೆಯ ತಿಳುವಳಿಕೆ ಪತ್ರ.

2) ಏಕ ವ್ಯಕ್ತಿ ವರದಿ.

3) ಕನ್ನಡ ಮತ್ತು ಬಹುಮಾಧ್ಯಮ.

4) ಟೆಂಡರ್.

5) ಓ. ಸಿ. ಆರ್.

6) ಫ್ಯಾಕ್ಸ್.

V. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2×12=24)**

1) ಕಾಲೇಜು ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆ ಹಾಗೂ ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಪಡಿಸಿ.

2) ಬೆಂಗಳೂರು ನಗರವನ್ನು ಕಾಡುತ್ತಿರುವ ಕಸದ ವಿಲೇವಾರಿಯ ಸಮಸ್ಯೆಯನ್ನು ಕುರಿತು ಪತ್ರಿಕಾ ವರದಿಯನ್ನು ತಯಾರಿಸಿ.

3) ಕನ್ನಡದಲ್ಲಿ ಕಂಪ್ಯೂಟರ್ ಬಳಕೆಯನ್ನು ಕುರಿತು ಬರೆಯಿರಿ.

4) ಅಂತರ್ಜಾಲ ಇಂದು ವಿಶ್ವವನ್ನು ಕಿರಿದಾಗಿಸಿದೆ ಹೇಗೆ ? ವಿವರಿಸಿ.

---